## Suo – moto - Revision
## (191) 255

**ಶ್ರೀ ಡಾ:ಬಗಲಿ ಸಾರ್ವಬೌಮ ಸಾತಗೌಡ** (ಇಂಡಿ)

ಅ) ಮೌಲ್ಯ ವರ್ಧಿತ ತೆರಿಗೆ ಕಾಯಿದೆ ಜಾರಿಗೆ ಬಂದಾಗಿನಿಂದ, ವಿಭಾಗಿಯ ಮೌಲ್ಯ ವರ್ಧಿತ ತೆರಿಗೆ ಅಧಿಕಾರಿಗಳು ರಾಜಸ್ವ ವೃದ್ಧಿಸಲು ಹೊರಡಿಸಲಾದ ಸ್ವಯಂ ಆದೇಶಗಳ ಸಂಖ್ಯೆ (ವಾರ್ಷಿವಾರು ವಿವರಗಳನ್ನು ನೀಡುವುದು).

ಆ) ಮೌಲ್ಯ ವರ್ಧಿತ ತೆರಿಗೆ ಕಾಯಿದೆ ಜಾರಿಗೆ ಬಂದಾಗಿನಿಂದ, ವಿಭಾಗಿಯ ಮೌಲ್ಯ ವರ್ಧಿತ ತೆರಿಗೆ ಅಧಿಕಾರಿಗಳು ಸ್ವಯಂ ಪರಿಷ್ಕರಣಾ ಆದೇಶಗಳಿಂದ ಉತ್ಪಾದನೆ ಆದ ಒಟ್ಟು ರಾಜಸ್ವದ ಮೊತ್ತ.

ಇ) ಅಜಾಗರೂಕತೆಯಿಂದ ಮಾಡಿದ ಲೆಕ್ಕಪರಿಶೋಧನೆಯಿಂದ ಉಂಟಾದ ರಾಜಸ್ವದ ಸೋರಿಕೆಯನ್ನು ತಡೆಗಟ್ಟಲು ಮತ್ತು ಸ್ವಯಂಪ್ರೇರಣಾ ಪರಿಷ್ಕರಣೆಯಿಂದ ರಾಜಸ್ವವನ್ನು ವೃದ್ಧಿಸಲು ಪ್ರತಿ ಮೌಲ್ಯವರ್ಧಿತ ತೆರಿಗೆ ವಿಭಾಗಗಳಲ್ಲಿ ಪ್ರತ್ಯೇಕ ಜಂಟಿ ಆಯುಕ್ತರುಗಳ ಹುದ್ದೆಗಳನ್ನು ವಿಶೇಷವಾಗಿ ಈ ಕಾರ್ಯಕ್ಕಾಗಿಯೇ ಸರಕಾರವು ಸೃಷ್ಟಿಸುವುದೆ?

**ಶ್ರೀ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿ**

**ಕನ್ನಡ ಭಾಷೆಯಲ್ಲಿ**

ಅ)

| ವರ್ಷಗಳು | ಎಸ್.ಎಂ.ಆರ್ ಆದೇಶಗಳ ಸಂಖ್ಯೆ | ವರ್ಷಗಳು | ಎಸ್.ಎಂ.ಆರ್ ಆದೇಶಗಳ ಸಂಖ್ಯೆ | ಒಟ್ಟು ಎಸ್.ಎಂ.ಆರ್ ಆದೇಶಗಳ ಸಂಖ್ಯೆ |
|---|---|---|---|---|
| 2005–06 | 18 | 2009–10 | 37 | |
| 2006–07 | 26 | 2010–11 | 31 | |
| 2007–08 | 48 | 2011–12 | 60 | |
| 2008–09 | 34 | 2012–13 | 72 | 326 |

ಆ)

| ವರ್ಷಗಳು | ಸೃಷ್ಟಿಸಿದ ಹೆಚ್ಚುವರಿ ತಗಾದೆ (ರೂ. ಕೋಟಿಗಳಲ್ಲಿ) | ವರ್ಷಗಳು | ಸೃಷ್ಟಿಸಿದ ಹೆಚ್ಚುವರಿ ತಗಾದೆ (ರೂ. ಕೋಟಿಗಳಲ್ಲಿ) | ಒಟ್ಟು ತಗಾದೆ (ರೂ. ಕೋಟಿಗಳಲ್ಲಿ) |
|---|---|---|---|---|
| 2005–06 | 5.64 | 2009–10 | 4.09 | |
| 2006–07 | 3.73 | 2010–11 | 15.79 | |
| 2007–08 | 7.46 | 2011–12 | 22.67 | |
| 2008–09 | 4.20 | 2012–13 | 5.84 | |
| **TOTAL** | **21.03** | | **48.39** | **69.42** |

ಇ) ಪ್ರಸ್ತುತ ಲೆಕ್ಕ ಪರಿಶೋಧನಾ ಅಧಿಕಾರಿಗಳು ಹೊರಡಿಸಿದ ಆದೇಶಗಳನ್ನು ವಿಭಾಗೀಯ ಮಟ್ಟದ ಜಂಟಿ ಆಯುಕ್ತರುಗಳು ಪರಿಶೀಲನೆ ಮಾಡುತ್ತಿರುತ್ತಾರೆ. ಯಾವುದೇ ಆದೇಶವು ರಾಜಸ್ವಕ್ಕೆ ದಕ್ಕೆ ಉಂಟುಮಾಡುತ್ತದೆ ಎಂದು ಕಂಡು ಬಂದಲ್ಲಿ ಅಂತಹ ಆದೇಶಗಳನ್ನು ಸದರಿ ಜಂಟಿ ಆಯುಕ್ತರು ಸ್ವಯಂ ಪರಿಷ್ಕರಣೆಗೆ ಒಳಪಡಿಸುತ್ತಾರೆ. ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಶ್ರೇಣಿಯಲ್ಲಿ ಪ್ರತ್ಯೇಕವಾಗಿ ಪರಿಷ್ಕರಣಾ ಕಾರ್ಯಕ್ಕೆ ನಿಯೋಜಿಸುವ ಯಾವುದೇ ನಿರ್ದಿಷ್ಟವಾದ ಪ್ರಸ್ತಾವನೆ ಸರಕಾರದ ಮುಂದೆ ಇರುವುದಿಲ್ಲ.

**ರಾಮಲಿಂಗೇಶ್ವರ ಮಠ**

**(233) 145**

**ಕುಮಾರಸ್ವಾಮಿ ಕೆ.ಜಿ (ಶಿವಮೊಗ್ಗ ಗ್ರಾಮಾಂತರ)**

ಅ) ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಭೂಮಿ ವರ್ಗಾವಣೆ ನೋಟಿಫಿಕೇಶನ್ ಆದ ನಂತರ ಅವುಗಳನ್ನು ಸರ್ವೆ ಮಾಡಿ ಗಡಿ ಗುರುತಿಸಿರುವುದಿಲ್ಲ. ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಯಾವುದೇ ಭೂಮಿ ವರ್ಗಾವಣೆಯಾಗಿರುವುದಿಲ್ಲ ಹಾಗೂ ಜಂಟಿ ಸರ್ವೆ ನಡೆಸಿರುವುದಿಲ್ಲ ಎಂದು ಮಾನ್ಯ ಅರಣ್ಯ ಸಚಿವರು ಹಿಂದಿನ ಅಧಿವೇಶನದಲ್ಲಿ ಉತ್ತರ ನೀಡಿರುವುದು ನಿಜವಲ್ಲವೆ?